# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 15/2022

ಪಿಡಬ್ಲ್ಯೂ: 02
ಸಿಡಬ್ಲ್ಯೂ: 03

**<u>ದಿನಾಂಕ: 06-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ರಘು |
| ತಂದೆಯ ಹೆಸರು | : ಚಂದ್ರಪ್ಪ |
| ವಯಸ್ಸು | : 30 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಗುಡಿಹಳ್ಳಿ |

**<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:</u>**

ನನಗೆ ಆರೋಪಿತರ ಗುರುತು ಇದೆ. ಅದೇ ರೀತಿ ಪ್ರಾಸಾ–**1** / ತಿಮ್ಮಯ್ಯ ಹಾಗೂ ಚಾಸಾ–**2** / ರಮೇಶ್ ಗೊತ್ತಿದ್ದಾರೆ. **23** ನೇ ತಾರೀಖು **2019** ನೇ ಇಸವಿಯಲ್ಲಿ ಈಗ ಐದು ವರ್ಷಗಳ ಹಿಂದೆ ಬೆಳಗ್ಗೆ **10.30** ಗಂಟೆಗೆ ನಾನು ಕೆಲಸಕ್ಕೆ ಹೋಗುತ್ತಿದ್ದೆ. ಕೆಳಗಡೆ ಹೊಲದಲ್ಲಿ ಆರೋಪಿತರು ಗಲಾಟೆ ಮಾಡಿಕೊಳ್ಳುತ್ತಿದ್ದರು. ಆ ಬಾಯಿ ಸಪ್ಪಳ ಕೇಳಿ ನಾನು ಅಲ್ಲಿಗೆ ಹೋದೆ. ಅಲ್ಲಿಯೇ ತಿಮ್ಮಯ್ಯ ಹಾಗೂ ರಮೇಶ್ ಇದ್ದರು. ಸದರಿ ತಿಮ್ಮಯ್ಯ ಹಾಗೂ ರಮೇಶ್ ಆಗಲೇ ನೆಲಕ್ಕೆ ಬಿದ್ದಿದ್ದರು. ನಾನೇನು ಆರೋಪಿತರ ಕೈಯಲ್ಲಿ ಆಯುಧಗಳನ್ನು ನೋಡಿಲ್ಲ. ಆರೋಪಿತರು ಒಮ್ಮೆಲೇ ಒಟ್ಟಿಗೆ ಬಂದು ಕಲ್ಲುಗಳಿಂದ ಹಾಗೂ ತಮ್ಮ ಕೈಕಾಲುಗಳಿಂದ ಹೊಡೆದು ಒದ್ದಿರುತ್ತಾರೆ. ನಾನು ಹಾಗೂ ತಿಮ್ಮಯ್ಯ ಬಿನ್ನ ಸಂಜೀವಪ್ಪ ಬಿಡಿಸಿಕೊಳ್ಳಲು ಹೋದೆವು. ಸದರಿ ರಮೇಶ್ ಹಾಗೂ ತಿಮ್ಮಯ್ಯ ಇವರ ತಲೆಯ ಭಾಗಗಳಲ್ಲಿ ಪೆಟ್ಟಾಗಿದ್ದವು ಹಾಗೂ ಅವರ ತಲೆಯ ಭಾಗದಲ್ಲಿ ಓಪನ್ ಆಗಿತ್ತು. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು: ಸರ್ಕಾರಿ ಅಭಿಯೋಜಕರವರಿಂದ:</u>**

**2.** ದಿನಾಂಕ **23–08–2019** ರಂದು ಬೆಳಗ್ಗೆ **10.30** ಗಂಟೆಗೆ ನಾನು ನಮ್ಮ ಸಂಬಂಧಿಕರಾದ ತಿಮ್ಮಯ್ಯನವರ ಜಮೀನಿನ ಪಕ್ಕದಲ್ಲಿರುವಾಗ ಸದರಿ ಜಮೀನಿನಲ್ಲಿ ತಿಮ್ಮಯ್ಯ ಹಾಗೂ ರಮೇಶ್ ಕೆಲಸ ಮಾಡುತ್ತಿದ್ದರು ಎನ್ನುವುದು ನಿಜ. ಆ ದಿನ ಆರೋಪಿತರೆಲ್ಲರೂ ಅಲ್ಲಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದರು ಎನ್ನುವುದು ನಿಜ. ನಂತರ ಅವರೆಲ್ಲರೂ ರಮೇಶ್ ಹಾಗೂ ತಿಮ್ಮಯ್ಯನವರನ್ನು ಸಾಯಿಸುವ ಉದ್ದೇಶದಿಂದ ಕೈಗಳಲ್ಲಿ ಕಬ್ಬಿಣದ ರಾಡು, ಮಚ್ಚು ಮತ್ತು ಕೊಡಲಿಯನ್ನು ಹಿಡಿದುಕೊಂಡು ತಿಮ್ಮಯ್ಯನಿಗೆ ಬೋಳಿ ಮಗನೆ, ಸೂಳೆಮಗನೆ ಈ ಜಮೀನು

ನಮ್ಮದು ಎಂದು ಮತ್ತೆ ನೀನು ಇಲ್ಲಿಗೆ ಬಂದರೆ ನಿಮ್ಮ ಹೆಣ್ಣುಮಕ್ಕಳನ್ನು ಇದೇ ಜಮೀನಿನಲ್ಲಿ ಮಾನಭಂಗ ಮಾಡಿ ಕೊಲೆ ಮಾಡುತ್ತೇವೆಂದು ಅವಾಚ್ಯ ಶಬ್ದಗಳಿಂದ ಬೈದರು ಎನ್ನುವುದು ನಿಜ. ಆರೋಪಿತರ ಪೈಕಿ ಶ್ರೀನಿವಾಸ ಕಬ್ಬಿಣದ ರಾಡಿನಿಂದ ರಮೇಶನ ತಲೆಗೆ ಹೊಡೆದ ಎನ್ನುವುದು ಗೊತ್ತಿಲ್ಲ. ಉಳಿದವರು ಕಾರದಪುಡಿಯನ್ನು ಎರಚಲು ಮುಂದಾದರು ಎಂದರೆ ನಾನು ಅದನ್ನು ನೋಡಿಲ್ಲ. ತಿಮ್ಮಯ್ಯನಿಗೆ ಎಲ್ಲರೂ ಸೇರಿ ಕೈಕಾಲುಗಳಿಂದ ಮೈಕೈಗೆ ಹೊಡೆದು ತುಳಿದಾಡಿದರು ಎನ್ನುವುದು ನಿಜ. ನಾನು ಆರೋಪಿತರ ಬಳಿ ಇದ್ದ ರಾಡು, ಮಚ್ಚು ಮತ್ತು ಕೊಡಲಿಯನ್ನು ಕಸಿದುಕೊಂಡು ಗಲಾಟೆ ಬಿಡಿಸಿದೆ ಎನ್ನುವುದು ಸರಿಯಲ್ಲ. ಅರೋಪಿತರು ಆ ಸ್ಥಳದಿಂದ ಹೊರಡುವ ಕಾಲಕ್ಕೆ ನಿಮ್ಮನ್ನು ಇಲ್ಲಿಯೇ ಕೊಲೆ ಮಾಡಿ ಜಮೀನಿನಲ್ಲಿ ಹೂತುಹಾಕುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು ಎನ್ನುವುದು ನಿಜ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ನಿಜ. ಹೇಳಿಕೆಯ ಸಂಬಂಧಿಸಿದ ಭಾಗವನ್ನು ನಿಪಿ–**2** ಎಂದು ಗುರುತಿಸಲಾಯಿತು. ಆರೋಪಿತರನ್ನು ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದು ಗುರುತಿಸುತ್ತೇನೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ.ಎಂ.ಹೆಚ್. ವಕೀಲರಿಂದಃ</u>**

**3.** ನಾನು ಆ ದಿನ ಭೂತನಹಟ್ಟಿ ರಸ್ತೆಯಲ್ಲಿ ಹೋಗುತ್ತಿದ್ದೆ. ಅ ರಸ್ತೆಯಿಂದ ಆರೋಪಿತರ ಹೊಲ ಸುಮಾರು ಮುಕ್ಕಾಲು ಕಿಲೋ ಮೀ. ದೂರದಲ್ಲಿದೆ ಎಂದರೆ ಅರ್ಧ ಕಿಮೀ ದೂರದಲ್ಲಿದೆ. ಚಾಸಾ–**2** / ರಮೇಶ್ ನಮ್ಮ ಚಿಕ್ಕಮ್ಮನ ಮಗಳನ್ನು ಮದುವೆಯಾಗಿದ್ದಾನೆ ಎನ್ನುವುದು ನಿಜ. ಆರೋಪಿತರ ಜಮೀನಿನ ಅಕ್ಕಪಕ್ಕದಲ್ಲಿ ನನಗೆ ಸೇರಿದ ಜಮೀನು ಹಾಗೂ ಮನೆ ಇಲ್ಲ ಎಂದರೆ ಆ ಊರಲ್ಲಿಯೇ ನನಗೆ ಸೇರಿದ ಸ್ಥಿರ ಆಸ್ತಿ ಇಲ್ಲ. ಆರೋಪಿ ಮಹಾಂತೇಶ್ ತನಗೆ ತಿಮ್ಮಯ್ಯ, ರಮೇಶ ಹಾಗೂ ತಿಮ್ಮಯ್ಯ ಬಿನ್ ಸಂಜೀವಯ್ಯತನಗೆ ಹಲ್ಲೆ ಮಾಡಿದ್ದಾರೆಂದು ಹೇಳಿ ದೂರನ್ನು ಕೊಟ್ಟಿದ್ದಾನೆ ಎನ್ನುವುದು ನಿಜ. ಆ ಕೇಸಿನಲ್ಲಿ ಸದರಿ ತಿಮ್ಮಯ್ಯ ಹಾಗೂ ಇತರರು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾರೆ ಎನ್ನುವುದು ನಿಜ. ನಾನು ಹೋಗಿದ್ದೆ ಎಂದು ಹೇಳಲಾದ ಕಾಲಕ್ಕೆ ಆರೋಪಿತರ ಪೈಕಿ ಮಹಿಳಾ ಆರೋಪಿತರು ಯಾರೂ ಇರಲಿಲ್ಲ ಎನ್ನುವುದು ನಿಜ. ನಾನು ಹೊಗುವುದರೊಳಗಾಗಿ ರಮೇಶ್ ಹಾಗೂ ತಿಮ್ಮಯ್ಯ ಹೊಲದಲ್ಲಿ ಬಿದ್ದಿದ್ದರು. ರಮೇಶ್ ಬಿದ್ದಂತಹ ಸ್ಥಳದಿಂದ ತಿಮ್ಮಯ್ಯ ಮೂರು ಹೆಜ್ಜೆ ದೂರದಲ್ಲಿ ಬಿದ್ದಿದ್ದ. ಅವರ ರಕ್ತ ಅಲ್ಲಿದ್ದ ಮಣ್ಣಿಗೆ ತಾಗಿತ್ತು. ಅವರ ಬಟ್ಟೆಗಳಿಗೂ ಕೂಡಾ ರಕ್ತ ತಗುಲಿತ್ತು. ಆ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

**4.** ಆ ದಿನ **1** ಮತ್ತು **2** ನೇ ಆರೋಪಿತರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದರು ಎನ್ನುವುದು ಗೊತ್ತಿಲ್ಲ. ನಾನು ಆ ದಿನ ಅಲ್ಲಿಗೆ ಹೋದಾಗ ಅವರಿಗೆ ಗಾಯವಾಗಿದ್ದನ್ನು

ನೋಡಿಲ್ಲ. ನಾನೇನು ದೂರು ಕೊಡುವ ಕಾಲಕ್ಕೆ ತಿಮ್ಮಯ್ಯನೊಂದಿಗೆ ಹೋಗಿಲ್ಲ. ಅಲ್ಲದೇ ಸದರಿ ತಿಮ್ಮಯ್ಯ ಹಾಗೂ ರಮೇಶ್ ಇವರನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ಸೇರಿಸಿಲ್ಲ. ಆ ಕಾಲಕ್ಕೆ ಅಕ್ಕಪಕ್ಕದ ಜಮೀನಿನವರು ಸೇರಿರಲಿಲ್ಲ. ಪೊಲೀಸರು ನನ್ನನ್ನೇನು ಖುದ್ದಾಗಿ ವಿಚಾರಣೆ ಮಾಡಿಲ್ಲ ಆದರೆ ಹೊಲದ ಬಳಿ ಕರೆದುಕೊಂಡು ಹೋಗಿ ಕೇಳಿದ್ದಾರೆ. ಗಲಾಟೆಯಾದ ದಿನವೇ ಪೊಲೀಸರು ಜಮೀನಿನ ಹತ್ತಿರ ಬಂದಿದ್ದರು ಆದರೆ ನನಗೆ ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆ ದಿನ ಹೊರತುಪಡಿಸಿ ಪೊಲೀಸರು ಮತ್ತೆ ನನ್ನನ್ನು ಬೇಟಿಯಾಗಿಲ್ಲ ಹಾಗೂ ನನ್ನನ್ನು ವಿಚಾರಿಸಿಲ್ಲ. ಆರೋಪಿತರು ಎಲ್ಲರೂ ಸೇರಿ ಕೈಕಾಲುಗಳಿಂದ ಹೊಡೆದರು ಮತ್ತು ಪ್ರಾಣ ಬೆದರಿಕೆ ಹಾಕಿದರು ಎಂದು ನಾನು ಪೊಲೀಸರಿಗೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಮಚ್ಚು, ಕೊಡಲಿ ಹಾಗೂ ರಾಡುಗಳನ್ನು ಪೊಲೀಸರು ತೆಗೆದುಕೊಂಡು ಹೋಗುವುದನ್ನು ನಾನು ನೋಡಿಲ್ಲ. ನಾನು ಒಬ್ಬನೇ ಅಲ್ಲಿ ಮಾಡಲಾದ ಮಹಜರಿಗೆ ಸಹಿ ಮಾಡಿದ್ದೇನೆ.

**5.** ದಿನಾಂಕ **23-08-2019** ರಂದು ಬೆಳಗ್ಗೆ **10.30** ಗಂಟೆಗೆ ನಾನು ಆ ಸ್ಥಳಕ್ಕೆ ಹೋಗಿದ್ದೆ ಅಲ್ಲಿ ಆರೋಪಿತರು ತಿಮ್ಮಯ್ಯ ಹಾಗೂ ರಮೇಶ್ ಇವರಿಗೆ ಹಲ್ಲೆ ಮಾಡುವುದನ್ನು ನೋಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅವರೆಲ್ಲರೂ ಸೇರಿ ಸದರಿ ನೊಂದ ವ್ಯಕ್ತಿಗಳಿಗೆ ಪ್ರಾಣ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತಿಮ್ಮಯ್ಯ ಹಾಗೂ ರಮೇಶ್ ನಮ್ಮ ಸಂಬಂಧಿಗಳು ಎಂಬ ಕಾರಣಕ್ಕಾಗಿ ಘಟನೆಯನ್ನು ನೋಡದೇ ಇದ್ದಾಗ್ಯೂ ನೋಡಿದ್ದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 15/2022

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

**ದಿನಾಂಕಃ 24-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ತಿಮ್ಮಯ್ಯ |
| ತಂದೆಯ ಹೆಸರು | : ಈರಾಬೋವಿ |
| ವಯಸ್ಸು | : 55 ವರ್ಷ |
| ಉದ್ಯೋಗ | : ಕೂಲಿ |
| ವಾಸ ಸ್ಥಳ | : ಗುಡಿಹಳ್ಳಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಆರೋಪಿತರ ಗುರುತು ಇದೆ. ಚಾಸಾ–**2** ರಮೇಶ ನನ್ನ ಮಗ. ದಿನಾಂಕ **23–08–2019** ರಂದು ದರಕಾಸ್ತಿನಲ್ಲಿ ನಮಗೆ ಬಂದಂತಹ ಎರಡು ಎಕರೆ ಜಮೀನನ್ನು ತಮಗೆ ಸೇರಿದ್ದು ಎಂದು ಆರೋಪಿತರು ದೌರ್ಜನ್ಯ ಮಾಡಿ ಹೊಡೆದುಹಾಕಿದರು. ನಾನು ಹಾಗೂ ಚಾಸಾ–**2** ಆ ಜಮೀನಿನಲ್ಲಿ ಮುಳ್ಳು ಗಿಡಗಂಟೆಗಳನ್ನು ಕಡಿದು ಆ ಜಮೀನನ್ನು ಹಸನು ಮಾಡುತ್ತಿದ್ದೆವು. ಬೆಳಗ್ಗೆ **10.30** ಗಂಟೆ ಸುಮಾರಿಗೆ ಕಲ್ಲು ಮತ್ತು ಕುಡುಗೋಲು ತೆಗೆದುಕೊಂಡು ಸಣ್ಣೀರಪ್ಪ, ಸೀನಪ್ಪ, ಜಯ್ಯಪ್ಪ, ಮಹಾಂತೇಶ್ ಹಾಗೂ ಹನುಮಂತಪ್ಪ ಬಂದರು. ಹನುಮಂತಪ್ಪನ ಹೆಸರನ್ನು ತಪ್ಪಾಗಿ ಯಲ್ಲಪ್ಪ ಎಂದು ಹೇಳಿದ್ದೇವೆ. ಅವರುಗಳು ಆ ಜಮೀನು ತಮ್ಮದು ಎಂದು ಹೇಳಿದರು. ಆ ಗಲಾಟೆಯಲ್ಲಿ ನನ್ನ ತಲೆಗೆ ಪೆಟ್ಟಾಯಿತು, ಯಾರು ಹೊಡೆದರು ಎಂದು ಗೊತ್ತಾಗಲಿಲ್ಲ. ಬೆನ್ನಿಗೆ ಬಸವರಾಜ್ ಎಂಬಾದ ಏಟುಗಳನ್ನು ಹೊಡೆದರು. ರಮೇಶನಿಗೆ ಯಾರು ಯಾವುದರಿಂದ ಹೊಡೆದರು ಎಂದು ನನಗೆ ಗಮನಿಸಲು ಆಗಲಿಲ್ಲ. ನಮಗೆ ಏಟಾದ ಬಗ್ಗೆ ನಾವು ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆವು. ಗಲಾಟೆ ಕಾಲಕ್ಕೆ ರಘು ತಂದೆ ಚಂದ್ರಪ್ಪ (ಚಾಸಾ–**3**) ಬಂದು ಗಲಾಟೆ ಬಿಡಿಸಿದರು. ಆ ಕುರಿತು ನಾನು ಪೊಲೀಸರಿಗೆ ದೂರನ್ನು ಕೊಟ್ಟಿದ್ದೇನೆ. ಆ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು.

**2.** ನಾವು ದೂರು ಕೊಟ್ಟ ಬಳಿಕ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿದರು ಮತ್ತು ಆ ಮಹಜರ್ ಕಾಲಕ್ಕೆ ಒಂದು ಕುಡುಗೋಲು ಹಾಗೂ ಒಂದು ರಾಡನ್ನು ಅಮಾನತ್ತುಪಡಿಸಿಕೊಂಡರು. ಈಗ ಐದು ವರ್ಷಗಳಾಗಿರುವುದರಿಂದ ಸಂಪೂರ್ಣ ನೆನಪಿಲ್ಲ. ಕುಡುಗೋಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು, ರಾಡನ್ನು ಮುದ್ದೆ ಮಾಲು **2** ಎಂದು ಗುರುತಿಸಲಾಯಿತು. ದೂರು ಕೊಟ್ಟ ಬಳಿಕ ಪೊಲೀಸರು ಮತ್ತೆ ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

**3**. ಆ ದಿನ ಆರೋಪಿತರು ಮುದ್ದೆ ಮಾಲು **1** ಹಾಗೂ **2** ಅಲ್ಲದೇ ಕಬ್ಬಿಣದ ಕೊಡಲಿ ಹಾಗೂ ಕಾರದಪುಡಿಯನ್ನು ಕೂಡಾ ತೆಗೆದುಕೊಂಡು ಬಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ನಿಮ್ಮ ಹೆಣ್ಣು ಮಕ್ಕಳನ್ನು ಆ ಜಮೀನಿನಲ್ಲಿ ಮಾನಭಂಗ ಮಾಡುವುದಾಗಿ ಬೈದು, ಆರೋಪಿ ಸೀನ ಕಬ್ಬಿಣದ ರಾಡಿನಿಂದ ರಮೇಶನ ತಲೆಗೆ ಹೊಡೆದ ಹಾಗೂ ಉಳಿದವರು ಕೈ ಹಾಗೂ ಕಾಲುಗಳಿಂದ ಹೊಡೆದು ನಮಗೆ ಕಾರದಪುಡಿ ಎರಚಲು ಪ್ರಯತ್ನಿಸಿದರು ಎನ್ನುವುದು ನಿಜ. ಆಗ ಚಾಸಾ–**3** ಅಲ್ಲಿಗೆ ಬಂದು ಕಬ್ಬಿಣದ ರಾಡನ್ನು ಹಾಗೂ ಜಯ್ಯಣ್ಣನಿಂದ ಕಬ್ಬಿಣದ ಮಚ್ಚನ್ನು ಕಸಿದುಕೊಂಡು ನಮ್ಮನ್ನು ಬಿಡಿಸಿದ ಎನ್ನುವುದು ನಿಜ. ಆರೋಪಿತರು ನನ್ನನ್ನು ಹಾಗೂ ನನ್ನ ಮಗನನ್ನು ಕೊಲೆ ಮಾಡಿ ಅದೇ ಜಮೀನಿನಲ್ಲಿ ಹೂತುಹಾಕುವುದಾಗಿ ಹೆದರಿಸಿದರು ಎನ್ನುವುದು ನಿಜ. ಮಹಜರ್ ಕಾಲಕ್ಕೆ ಪೊಲೀಸರು ನನಗೆ ಈಗ ತೋರಿಸಲಾದ ಮುದ್ದೆ ಮಾಲು **1** ಹಾಗೂ **2** ರ ಜೊತೆಗೆ ಆ ಕಬ್ಬಿಣದ ಕೊಡಲಿಯನ್ನು ಕೂಡಾ ಅಮಾನತ್ತುಪಡಿಸಿಕೊಂಡರು ಎನ್ನುವುದು ನಿಜ. ಸದರಿ ಕಬ್ಬಿಣದ ಕೊಡಲಿಯನ್ನು ಮುದ್ದೆ ಮಾಲು **3** ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಕಟಕಟೆಯಲ್ಲಿರುವ ಆರೋಪಿತರೇ ನನಗೂ ಮತ್ತು ನನ್ನ ಮಗನಿಗೂ ಆ ದಿನ ಹಲ್ಲೆ ಮಾಡಿದವರು ಎನ್ನುವುದು ನಿಜ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ.ಎಂ.ಹೆಚ್. ವಕೀಲರಿಂದಃ**

**4**. ಚಾಸಾ–**3** ರವರ ಚಿಕ್ಕಮ್ಮನ ಮಗಳನ್ನೇ ನನ್ನ ಮಗ ರಮೇಶನೊಂದಿಗೆ ಮದುವೆ ಮಾಡಲಾಗಿದೆ ಎನ್ನುವುದು ನಿಜ. ಚಾಸಾ–**4** / ನೇತ್ರಾವತಿ ನನ್ನ ಮಗಳು ಎನ್ನುವುದು ನಿಜ. ಚಾಸಾ–**6** / ಸಂಜೀವಪ್ಪ ನನ್ನ ಸ್ವಂತ ಅಣ್ಣ ಎನ್ನುವುದು ನಿಜ. ಚಾಸಾ–**5** / ಕದುರಪ್ಪ ನನ್ನ ಸ್ನೇಹಿತ ಎನ್ನುವುದು ಸರಿಯಲ್ಲ. ನನ್ನ ಹುಟ್ಟಿದ ದಿನಾಂಕ ನನಗೆ ನೆನಪಿಲ್ಲ. ಅದೇ ರೀತಿ ನನ್ನ ಮದುವೆ ದಿನಾಂಕ ಕೂಡಾ ಹೇಳಲು ಬರುವುದಿಲ್ಲ. ನಿಪಿ–**1** ನ್ನು ನಾನು ಟೈಪ್ ಮಾಡಿಸಿಲ್ಲ. ನನ್ನ ಮಕ್ಕಳು ಅದನ್ನು ಟೈಪ್ ಮಾಡಿಸಿದ್ದರಿಂದ ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಅವರು ಅದನ್ನು ಎಲ್ಲಿ ಟೈಪ್ ಮಾಡಿಸಿದ್ದಾರೆಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಮುದ್ದೆ ಮಾಲು **1** ರಿಂದ **3** ಗಳನ್ನು ನಾನೇ ನಮ್ಮ ಮನೆಯಿಂದ ಒಯ್ದು ಪೊಲೀಸರಿಗೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಅವು ಜಮೀನಿನಲ್ಲಿ ಇದ್ದವು.

**5.** ದಿನಾಂಕ **23–08–2019** ರ ಮೂರು ದಿನಗಳ ನಂತರ ಪೊಲೀಸರು ಗಲಾಟೆಯಾದ ಸ್ಥಳಕ್ಕೆ ಬಂದು ಮಹಜರ್ ಮಾಡಿದರು. ಅವರು ಬಂದಾಗ ಬೆಳಗ್ಗೆ **11.00** ಗಂಟೆಯಾಗಿತ್ತು. ನಾನು ಆಗ ಆಸ್ಪತ್ರೆಯಲ್ಲಿದ್ದ ಕಾರಣ ಮುದ್ದೆ ಮಾಲು **1** ರಿಂದ **3** ಪೊಲೀಸರು ಸ್ಥಳಕ್ಕೆ ಬಂದಾಗ ಎಲ್ಲಿ ಇದ್ದವು ಎಂದು ಗೊತ್ತಿಲ್ಲ. ಅಲ್ಲದೇ ಅವುಗಳನ್ನು ಪೊಲೀಸರಿಗೆ ಯಾರು ಕೊಟ್ಟರು ಎಂದು ಗೊತ್ತಿಲ್ಲ. ಆರೋಪಿ ಸಣ್ಣೇರಪ್ಪ ಗೋಮಾಳದ **4** ಎಕರೆ ಜಮೀನಿನಲ್ಲಿ ಅಡಿಕೆ ಮತ್ತು ಬಾಳೆ ತೋಟ ಮಾಡಿದ್ದಾನೆ ಎಂದರೆ ಆತ **2** ಎಕರೆ ಜಮೀನಿನಲ್ಲಿ ತೋಟ ಮಾಡಿದ್ದು ನಾವು **2** ಎಕರೆಯಲ್ಲಿ ತೋಟ ಮಾಡಿದ್ದೇವೆ. ನಾವು ಅಲ್ಲಿ ಯಾವುದೇ ತೋಟವನ್ನು ಮಾಡಿಲ್ಲ ಎಂದರೆ ನಮಗೆ ಅವರು ಜಮೀನನ್ನು ಮಾಡಲು ಬಿಡುತ್ತಿಲ್ಲ.

**6.** ದಿನಾಂಕ **23–08–2019** ರಂದು ಸಣ್ಣೇರಪ್ಪ ಹುಲುಗೇಶಿ ಎನ್ನುವವರ ಟ್ರಾಕ್ಟರನ್ನು ತೆಗೆದುಕೊಂಡು ಬಂದು ಜಮೀನಿಗೆ ಮಣ್ಣನ್ನು ಹೊಡೆದುಕೊಳ್ಳುತ್ತಿದ್ದ ಎನ್ನುವುದು ನಿಜ. ಆಗ ನಾನು ಮತ್ತು ರಮೇಶ ಸೇರಿ ಮಹಾಂತೇಶನಿಗೆ ಹಳ್ಳದ ಮಣ್ಣನ್ನು ಜಮೀನಿಗೆ ಹೊಡೆದುಕೊಳ್ಳಬೇಡಿ ಎಂದು ತಡೆಯಲು ಹೋದೆವು ಎನ್ನುವುದು ನಿಜ. ಆಗ ನಾನು, ರಮೇಶ, ನನ್ನ ಇನ್ನೋರ್ವ ಮಗ ವೀರೇಶ ಹಾಗೂ ಚಾಸಾ–**6** ರವರ ಮಗ ತಿಮ್ಮಯ್ಯ ಸೇರಿ ಮಹಾಂತೇಶನಿಗೆ ಹೊಡೆದವು ಎಂದು ಆತ ನಮ್ಮ ಮೇಲೆ ದೂರು ಕೊಟ್ಟಿದ್ದಾನೆ ಎನ್ನುವುದು ನಿಜ. ಆ ಕೇಸಿನಲ್ಲಿ ನಾವು ಆರೋಪಿತರಾಗಿ ಹಾಜರಾಗುತ್ತಿದ್ದೇವೆ ಎನ್ನುವುದು ನಿಜ. ಮಹಾಂತೇಶ ಸರ್ಕಾರಿ ಆಸ್ಪತ್ರೆಯಲ್ಲಿ ಆ ದಿನ ಅಡ್ಮಿಟ್ ಆಗಿದ್ದ ಎನ್ನುವುದು ನಿಜ. ಸದರಿ ಮಹಾಂತೇಶ ದಿನಾಂಕ **23–08–2019** ರಂದು ಮದ್ಯಾಹ್ನ **2.45** ಗಂಟೆಗೆ ನಮ್ಮ ವಿರುದ್ಧ ಐಮಂಗಲ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾನೆ ಎನ್ನುವುದು ನಿಜ.

7. ವೆಂಕಟೇಶ್ ಎಂಬುವರು ನಮ್ಮ ಊರಲ್ಲಿ ವಕೀಲರು ಇದ್ದಾರೆ ಎನ್ನುವುದು ನಿಜ. ಅವರು ನಮಗೆ ಸಂಬಂಧಿ ಎನ್ನುವುದು ಸರಿಯಲ್ಲ. ಅವರೇ ನಮಗೆ ಐಮಂಗಲ ಪೊಲೀಸ್ ಠಾಣೆಯಲ್ಲಿ ದೂರು ಕೊಡಲು ಹೇಳಿದರುಮತ್ತು ಅಲ್ಲಿದೂರನ್ನು ಸ್ವೀಕರಿಸದೇ ಇದ್ದ ಕಾರಣ ಚಿತ್ರದುರ್ಗದ ಎಸ್.ಪಿ. ಕಛೇರಿಗೆ ಕರೆದುಕೊಂಡು ಬಂದು ತಮ್ಮ ಒತ್ತಡವನ್ನು ಬಳಸಿ ಮುಂದೆ ಐಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುವಂತೆ ಮಾಡಿದರು ಎನ್ನುವುದು ಸರಿಯಲ್ಲ. ಮಹಾಂತೇಶ್ ಕೊಟ್ಟ ದೂರಿನಲ್ಲಿ ಸದರಿ ವಕೀಲರೇ ನಮ್ಮ ಪರವಾಗಿ ಹಾಜರಾಗಿ ನಮಗೆ ಜಾಮೀನು ಕೊಡಿಸಿದ್ದಾರೆ ಎನ್ನುವುದು ನಿಜ.

**8.** ಆ ದಿನ ಸುಮಾರು **30** ಜನ ಬಂದಿದ್ದರು. ಆ ಎಲ್ಲಾ ಜನರ ಹೆಸರುಗಳನ್ನು ಹೇಳಲು

ಆಗುವುದಿಲ್ಲ. ನಾನು ಆ ದಿನ ಜಮೀನಿನ ಮೇಲ್ಭಾಗದಲ್ಲಿ ಇದ್ದೆ, ರಮೇಶ ಅದರ ಕೆಳಭಾಗದಲ್ಲಿ ಇದ್ದ. ಕಾರಣ ಆತನಿಗೆ ಹೇಗೆ ಪೆಟ್ಟಾಯಿತು ಮತ್ತು ಯಾರು ಹಲ್ಲೆ ಮಾಡಿದರು ಎಂಬುದನ್ನು ನನಗೆ ಗಮನಿಸಲು ಸಾಧ್ಯವಾಗಲಿಲ್ಲ ಎನ್ನುವುದು ನಿಜ. ನಾನು ಇದ್ದ ಜಾಗದಲ್ಲಿ ಕಾರದಪುಡಿ ಬಿದ್ದಿದ್ದನ್ನು ನಾನು ನೋಡಿಲ್ಲ. ರಮೇಶ ಇದ್ದಂತಹ ಜಾಗದಲ್ಲಿ ಜಮೀನಿನ ಮೇಲೆ ರಕ್ತ ಬಿದ್ದಿತ್ತು. ಆ ಸ್ಥಳದಲ್ಲಿ ಕಾರದಪುಡಿ ಬಿದ್ದದ್ದನ್ನು ನಾನು ನೋಡಿಲ್ಲ. ಅಕ್ಕಪಕ್ಕದ ಜಮೀನುಗಳ **10–15** ಜನ ಅಲ್ಲಿಗೆ ಬಂದಿದ್ದರು. ಆದರೆ ಅವರುಗಳು ನಮ್ಮನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿಲ್ಲ. ಚಾಸಾ–**3** ರವರಿಗೆ ಅಲ್ಲಿ ಮನೆಯಾಗಲೀ ಅಥವಾ ಜಮೀನಾಗಲೀ ಇಲ್ಲವೆನ್ನುವುದು ನಿಜ.

**9**. ದಿನಾಂಕ **23–08–2019** ರಂದು ನಾನು ಹಾಗೂ ರಮೇಶ್ ಐಮಂಗಲ ಪೊಲೀಸ್ ಠಾಣೆಗೆ ಮದ್ಯಾಹ್ನ **3.00** ಗಂಟೆಗೆ ಹೋಗಿದ್ದೆವು. ಆಗ ಪೊಲೀಸರು ತಾವೇ ದೂರನ್ನು ಕೈಬರಹದಲ್ಲಿ ತಯಾರಿಸಿಕೊಟ್ಟರು ನಾನು ಅದಕ್ಕೆ ಸಹಿ ಮಾಡಿದೆ. ಪೊಲೀಸರು ಆ ದಿನ ರಮೇಶನನ್ನು ವಿಚಾರಣೆ ಮಾಡಿಲ್ಲ. ಆರೋಪಿತರಾದ ಜಯ್ಯಪ್ಪ, ಶ್ರೀನಿವಾಸ ಮತ್ತು ಬಸವರಾಜ್ ಬೆಳಗಟ್ಟ ಗ್ರಾಮದವರು ಎನ್ನುವುದು ನಿಜ. ಅವರ ಗ್ರಾಮ ಗೋಮಾಳ ಜಮೀನಿನಿಂದ **4** ಕಿಮೀ ದೂರದಲ್ಲಿದೆ ಎನ್ನುವುದು ನಿಜ. ಆರೋಪಿತರಾದ ನಾಗರತ್ನಮ್ಮ, ಯಲ್ಲಪ್ಪ ಹಾಗೂ ಮಂಜುಳಾ ಇವರು ಹಿರಿಯೂರಿನ ವೇದಾವತಿ ನಗರದಲ್ಲಿ ಇರುತ್ತಾರೆ ಎನ್ನುವುದು ಸರಿಯಲ್ಲ. ಅವರು ಗುಡಿಹಳ್ಳಿಯಲ್ಲಿ ವಾಸವಿದ್ದಾರೆ. ತನಿಖಾಧಿಕಾರಿಯ ಮುಂದೆ ಸದರಿ ಆರೋಪಿತರು ಹಿರಿಯೂರಿನ ವೇದಾವತಿ ನಗರದಲ್ಲಿ ವಾಸವಾಗಿದ್ದಾರೆ ಎಂದು ನಾನು ಹೇಳಿಲ್ಲ. ಮುದ್ದೆ ಮಾಲು **1** ರಿಂದ **3** ಇವುಗಳ ಮೇಲೆ ಆ ದಿನ ರಕ್ತ ತಗಲಿತ್ತೊ ಅಥವಾ ಇಲ್ಲವೋ ಎಂದು ನಾನು ಗಮನಿಸಿಲ್ಲ.

**10**. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿಲ್ಲ ಎನ್ನುವುದು ಸರಿಯಲ್ಲ. ಆ ದಿನ ಶ್ರೀನಿವಾಸ ಕಬ್ಬಿಣದ ರಾಡಿನಿಂದ ನನ್ನ ಮಗನ ತಲೆಗೆ ಹೊಡೆದ ಮತ್ತು ಉಳಿದ ಆರೋಪಿತರು ಕೈಕಾಲಿನಿಂದ ಹೊಡೆದು ನಮಗೆ ಕಾರದಪಡಿ ಎರಚಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ರಘು ಬಂದು ಆ ಮುದ್ದೆ ಮಾಲುಗಳನ್ನು ಕಸಿದುಕೊಂಡು ನಮ್ಮನ್ನು ಸದರಿ ಆರೋಪಿತರ ಕೈಯಿಂದ ಬಿಡಿಸಿದ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದಾಗ ನಾನು ಅಲ್ಲಿ ಇರಲಿಲ್ಲ ಎಂದರೆ ಈಗಾಗಲೇ ಹೇಳಿದಂತೆ ನಾನು ಆಸ್ಪತ್ರೆಯಲ್ಲಿದ್ದೆ.

**11**. ಆ ದಿನ ಜಗಳ ಬಿಡಿಸಲು ಬಂದ ಜನ ತಳ್ಳಾಡಿದ್ದರಿಂದ ನಾನು ಹಾಗೂ ರಮೇಶ್ ಕೆಳಗೆ ಬಿದ್ದಿದ್ದು ಅದರಿಂದ ನಮಗೆ ಏಟಾಗಿದ್ದು ಅದನ್ನೇ ದುರುಪಯೋಗಪಡಿಸಿಕೊಂಡು ಆಗಲೇ

ಮಹಾಂತೇಶ್ ದೂರು ಕೊಟ್ಟಿದ್ದರಿಂದ ನಾವು ಒಂದು ಈ ಸುಳ್ಳು ದೂರನ್ನು ಕೊಟ್ಟೆವು ಎನ್ನುವುದು ಸರಿಯಲ್ಲ. ನಾನು ಹೇಳಿದಂತೆ ಆ ದಿನ ಯಾವುದೇ ಘಟನೆ ನಡೆದಿಲ್ಲ, ನಮ್ಮ ಮೇಲೆ ಕೇಸು ಆಗಿದೆ ಎಂಬ ಕಾರಣಕ್ಕಾಗಿ ನಾವು ಕೂಡಾ ಒಂದು ಸುಳ್ಳು ದೂರನ್ನು ಕೊಟ್ಟೆವು ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.